# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 422(602) |
| ಮಾನ್ಯ ಸದಸ್ಯರ ಹೆಸರು | : | ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶಿತರು) |
| ಉತ್ತರಿಸುವ ದಿನಾಂಕ | : | 11.03.2025 |
| ಉತ್ತರಿಸುವ ಸಚಿವರು | : | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

<table>
<tr><th>ಕ್ರ. ಸಂ.</th><th>ಪ್ರಶ್ನೆಗಳು</th><th>ಉತ್ತರ</th></tr>
<tr><td>ಅ.</td><td>ಕಳೆದ 2 ವರ್ಷಗಳಲ್ಲಿ KIADB ವತಿಯಿಂದ ರಾಜ್ಯದಲ್ಲಿ ಎಷ್ಟು ಕೈಗಾರಿಕಾ ಪ್ರದೇಶಾಭಿವೃದ್ಧಿ ನಿರ್ಮಾಣಗೊಳಿಸಲಾಗಿದೆ: (ಜಿಲ್ಲಾವಾರು ವಿವರ ಒದಗಿಸುವುದು)</td><td rowspan="3">ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಕಳೆದ 2 ವರ್ಷಗಳಲ್ಲಿ ಈ ಕೆಳಕಂಡ 7 ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ:
<table>
<tr><th>ಕ್ರ. ಸಂ.</th><th>ಜಿಲ್ಲೆ</th><th>ಅಭಿವೃದ್ಧಿಪಡಿಸಲಾಗುತ್ತಿರುವ ಕೈಗಾರಿಕಾ ಪ್ರದೇಶಗಳು</th></tr>
<tr><td>1.</td><td>ಯಾದಗಿರಿ</td><td>ಕಡೇಚೂರ 2ನೇ ಹಂತ</td></tr>
<tr><td>2.</td><td>ಧಾರವಾಡ</td><td>ಎಲೆಕ್ಟ್ರಾನಿಕ್ಸ್ ಮ್ಯಾನ್ಯುಫ್ಯಾಕ್ಚುರಿಂಗ್ ಕ್ಲಸ್ಟರ್- ಕೋಟೂರ-ಬೇಲೂರ</td></tr>
<tr><td>3.</td><td>ಧಾರವಾಡ</td><td>ಮಮ್ಮಿಗಟ್ಟಿ 2ನೇ ಹಂತ</td></tr>
<tr><td>4.</td><td>ಧಾರವಾಡ</td><td>ಧಾರವಾಡ ಕೈಗಾರಿಕಾ ಪ್ರದೇಶ</td></tr>
<tr><td>5.</td><td>ಬೆಳಗಾವಿ</td><td>ಕಣಗಲಾ 2ನೇ ಹಂತ</td></tr>
<tr><td>6.</td><td>ಕಲಬುರ್ಗಿ</td><td>ನಂದೂರ ಕೆಸರಟಗಿ 3ನೇ ಹಂತ</td></tr>
<tr><td>7.</td><td>ವಿಜಯಪುರ</td><td>ಅಲಿಯಾಬಾದ್ 3ನೇ ಹಂತ</td></tr>
</table>
ಸದರಿ ಕೈಗಾರಿಕಾ ಪ್ರದೇಶಗಳು ಇನ್ನೂ ಅಭಿವೃದ್ಧಿಗೊಳಿಸುತ್ತಿದ್ದು, ಧಾರವಾಡ ಜಿಲ್ಲೆಯ ಎಲೆಕ್ಟ್ರಾನಿಕ್ಸ್ ಮ್ಯಾನ್ಯುಫ್ಯಾಕ್ಚುರಿಂಗ್ ಕ್ಲಸ್ಟರ್-ಕೋಟೂರ-ಬೇಲೂರ ಕೈಗಾರಿಕಾ ಪ್ರದೇಶದಲ್ಲಿ ಮಾತ್ರ 01 ಉದ್ದಿಮೆಗೆ ಒಟ್ಟು 30 ಎಕರೆ ಜಮೀನನ್ನು ಹಂಚಿಕೆ ಮಾಡಲಾಗಿದೆ.<br><br>
ಮಂಡಳಿಯು ನಿವೇಶನ ಹಂಚಿಕೆ ಪಡೆದ ಹಂಚಿಕೆದಾರರೊಂದಿಗೆ ನೆರವೇರಿಸಲಾಗುವ ಗುತ್ತಿಗೆ ಕರಾರು ಪತ್ರದಲ್ಲಿ ಸರ್ಕಾರದ ಕೈಗಾರಿಕಾ ನೀತಿ ಅನುಸಾರ ಉದ್ಯೋಗಾವಕಾಶ ಕಲ್ಪಿಸಬೇಕೆಂಬ ಷರತ್ತನ್ನು ವಿಧಿಸಲಾಗುತ್ತದೆ. ಅಲ್ಲದೇ, ಜಮೀನು ಕಳೆದುಕೊಂಡ ಕುಟುಂಬದ ಕನಿಷ್ಟ ಒಬ್ಬ ಸದಸ್ಯನಿಗೆ ಉದ್ಯೋಗಾವಕಾಶ ಕಲ್ಪಿಸಲು ಷರತ್ತು ವಿಧಿಸಲಾಗುತ್ತಿದೆ.<br><br>
ಕಳೆದ 2 ವರ್ಷಗಳಲ್ಲಿ ಅಭಿವೃದ್ಧಿಪಡಿಸಲಾಗುತ್ತಿರುವ ಕೈಗಾರಿಕಾ ಪ್ರದೇಶಗಳಲ್ಲಿ ಇನ್ನೂ ಉದ್ದಿಮೆಗಳು ಪ್ರಾರಂಭವಾಗಬೇಕಿರುತ್ತದೆ.</td></tr>
<tr><td>ಆ.</td><td>KIADB ವತಿಯಿಂದ ಕಳೆದ 2 ವರ್ಷಗಳಲ್ಲಿ ಎಷ್ಟು ಕೈಗಾರಿಕೋದ್ಯಮಗಳಿಗೆ ಜಮೀನು ಹಂಚಿಕೆ ಮಾಡಲಾಗಿದೆ: (ಜಿಲ್ಲಾವಾರು ವಿವರ ಒದಗಿಸುವುದು)</td></tr>
<tr><td>ಇ.</td><td>KIADB ವತಿಯಿಂದ ಕೈಗಾರಿಕೆಗಳಿಗೆ ಜಮೀನು ಹಂಚಿಕೆ ಮಾಡುವಲ್ಲಿ ಸ್ಥಳೀಯರಿಗೆ ಉದ್ಯೋಗ ನೀಡಬೇಕೆಂದು ಷರತ್ತು ವಿಧಿಸಲಾಗುತ್ತದೆಯೇ: ಹಾಗಿದ್ದಲ್ಲಿ, ಕಳೆದ 2 ವರ್ಷಗಳಲ್ಲಿ ಎಷ್ಟು ಉದ್ಯೋಗಗಳನ್ನು ಕಲ್ಪಿಸಲಾಗಿದೆ? (ವಿವರ ಒದಗಿಸುವುದು)</td></tr>
</table>

**ಸಂಖ್ಯೆ: ಸಿಐ 130 ಐಎಪಿ 2025**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು